ಬೂಕನಕೆರೆ ವಿಜೇಂದ್ರ, ಮೈಸೂರು
ನಗುವ ಹೆಂಗಸರನ್ನು ನಂಬಬೇಡ ಎನ್ನುತ್ತಾರೆ. ನಗುವ ಹುಡುಗಿಯರನ್ನು ನಂಬಬಹುದಾ?



‘ನಂಬಿ. ನಂಬದಿದ್ದರೆ ವ್ಯಾಲೆಂಟೈನ್ ದಿನದಂದು ನಮಗೆ ಭಾರಿ ನಷ್ಟ’ ಎಂದಿತು ಗುಲಾಬಿ ಲಾಬಿ.

ಕೆ.ಎಂ. ವಿಭೂತಿ, ಹರಿಹರ
ಬಕ್ಕತಲೆ ಇರುವ ವ್ಯಕ್ತಿ ರಾಜ್ಯದ ಮುಖ್ಯಮಂತ್ರಿ ಆದರೆ ರಾಜ್ಯಕ್ಕೆ ಬರಗಾಲವಂತೆ. ಹೌದಾ?
ಬಕ್ಕತಲೆ ಇರುವವನು ಆದರೆ ಅಲ್ಲ, ಬೋಳಿಸುವ ಬುದ್ಧಿ ಇರುವವನಾದರೆ.

ಮೈಸೂರು ಕುಸುಮ, ಶ್ರವಣಬೆಳಗೊಳ
ತುಂಬ ದಿನದ ನಂತರ ಬರೆಯಲು ಪ್ರಾರಂಭಿಸಿದ್ದೇನೆ. ಪ್ರೋತ್ಸಾಹ ಕೊಡುತ್ತೀರಾ?
ಜಾಲತಾಣಗಳಲ್ಲಿ ಬರೆಯಿರಿ. ಪುಸ್ತಕ ಕೊಂಡು ಓದುವ ಅಭ್ಯಾಸ ಕನ್ನಡಿಗರಲ್ಲಿ ಅಷ್ಟಿಲ್ಲ.

ಮಹಾವೀರ ಕಾಸರ, ಶಿವಮೊಗ್ಗ
ನ್ಯಾಯದೇವತೆ ತಕ್ಕಡಿಯಲ್ಲಿ ತೂಗುತ್ತಿರುವುದು ಏನನ್ನು?



ಸಾಕ್ಷಿಗಳ, ವಕೀಲರ ಪ್ರಾಮಾಣಿಕತೆಯನ್ನು.

ಎಸ್ಸೆನ್ ಮಹಾಬಲರಾವ್, ಎನ್ನರ್ಪುರ
ಆಯಕಟ್ಟಿನ ಸ್ಥಳ ಬೆಳ್ಳಿ ಬಂಗಾರ ಇದ್ದಂತೆ?
ಅಲ್ಲ, ನಾಜೂಕಾಗಿ ನೋಡಿಕೊಳ್ಳಬೇಕಾದ ರೇಷ್ಮೆಯಂತೆ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಮನುಷ್ಯನಿಗೆ ಶ್ವಾಸ ಮತ್ತು ನಿಶ್ವಾಸ ಇವೆ. ರಾಜಕೀಯಕ್ಕೆ?
ಅವಿಶ್ವಾಸ ಮತ್ತು ದೂರ್ವಾಸ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಕೆಮ್ಮಿ ಕೆಮ್ಮಿ ರೋಗ; ಕೆರೆದು ಕೆರೆದು ಹುಣ್ಣು. ಈ ವಾಕ್ಯವನ್ನು ರಾಜಕೀಯಕ್ಕೆ ಹೋಲಿಸಿದರೆ?
ಚಚ್ಚಿ ಕೊಚ್ಚಿ ಪುಢಾರಿ; ಹಂಚಿ ಹೊಂಚಿ ಮಂತ್ರಿ.

ಅಮರಯ್ಯಾ ಪತ್ರಿಮಠ, ಸುರಪುರ
ಸದಾ ಕ್ರಿಯಾಶೀಲರಾಗಿರಬೇಕೆಂದರೆ?
ಮನೆಯಲ್ಲಿ ಸುಮ್ಮನೆ ಕೂರಲಾಗದಂತಹ ವಾತಾವರಣ ಬೆಳೆಸಿಕೊಳ್ಳಬೇಕು.

ದಿನೇಶ್, ಗುಡ್ಡದೂರು
ಟೀವಿ ಜ್ಯೋತಿಷಿಗಳು ವೀಕ್ಷಕರಿಗೆ ‘ದೂರವಾಣಿ ಕರೆ ಮಾಡಿ. ಪರಿಹಾರ ಹೇಳುತ್ತೇನೆ’ ಎನ್ನುವುದೇಕೆ?
ಹಾಗೆ ಖಾಸಗಿಯಾಗಿ ಬಂದಾಗಲೇ ಜ್ಯೋತಿಷಿಗಳ ಕಷ್ಟ ಪರಿಹಾರವಾಗುವುದು.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ಸೌಕರ್ಯಗಳು ಮನುಷ್ಯನನ್ನು ಬೆಳೆಸುವುದಿಲ್ಲ, ಕಷ್ಟಕಾರ್ಪಣ್ಯಗಳೇ ಬೆಳವಣಿಗೆಗೆ ಸಹಕಾರಿ ಎನ್ನುವುದೇಕೆ?
ಮುಳ್ಳು ಚುಚ್ಚದಿದ್ದರೆ ಚಪ್ಪಲಿಯ ಆವಿಷ್ಕಾರ ಆಗುತ್ತಿರಲಿಲ್ಲ. ಶೋಷಣೆಯು ಶೋಧನೆಯ ಜನಕ.

ಪಿ. ಗೋವಿಂದರಾಜ್, ಶಿವಮೊಗ್ಗ
ಹೆಂಡತಿ ದೀರ್ಘ ಕವನ. ಪ್ರೇಯಸಿ ಚುಟುಕ. ಹಾಗಾದರೆ ಗಂಡುಮಕ್ಕಳು?
ಹಾಳೆ.

ಬಿ.ಎಂ. ಸುಬ್ಬಣ್ಣ, ಬೆಂಗಳೂರು
ಸಂಸಾರದ ಸಾರ ಹೆಚ್ಚಿಸಲು ಯಾವ ಗೊಬ್ಬರ ಹಾಕಬೇಕು?
ನಾರೀಗುಣಪ್ರಶಂಸಕ ಗೊಬ್ಬರ ಹಾಕಿದರೆ ಸಾಕು.

ಗಂಜಾಮ್ ನಾಗರಾಜ್, ಮೈಸೂರು
ಈ ಪ್ರಪಂಚದಲ್ಲಿ ಸೊಸೆಯನ್ನು ಮಗಳಂತೆ ಕಾಣುವ ಅತ್ತೆ ಇರುವುದೇ ಇಲ್ಲವೆ?
ಮಗಳೊಡನೆ ಜಗಳ ಆಡುವ ತಾಯಂದಿರು ಸೊಸೆಯನ್ನು ಮಗಳಂತೆಯೇ ಕಾಣುವರಂತೆ.

ಸಿ.ಕೆ. ಗಣಪ್ಪನವರ, ಮುಂಡರಗಿ
ಗ್ಯಾರೇಜಿಗೂ, ಮ್ಯಾರೇಜಿಗೂ ಏನು ವ್ಯತ್ಯಾಸ?
ಗ್ಯಾರೇಜಿನಲ್ಲಿ ಹೊಸ ಹೊಸ ಮಾಡೆಲ್‌ಗಳು ಕಂಡುಬರುತ್ತವೆ.

## ಬಹುಮಾನಿತ ಪ್ರಶ್ನೆ

ಶೃತಿ ರಿಗ್ರೆಟ್ ಅಯ್ಯರ್, ಅಮೆರಿಕಾ
ರೌಡಿಗಳಿಗೂ, ಅತ್ಯಾಚಾರಿಗಳಿಗೂ ಏನು ವ್ಯತ್ಯಾಸ?
ರೌಡಿ ‘ಅಣ್ಣ’ ಎನ್ನಿಸಿಕೊಳ್ಳಬಯಸುತ್ತಾನೆ.

ಹೆಚ್.ಎಂ. ಚನ್ನವೀರಯ್ಯ, ಹೂವಿನಹಡಗಲಿ
ಪ್ರಾಣಿ ಪಕ್ಷಿಗಳಲ್ಲೂ ಚುನಾವಣೆ ಇದ್ದಿದ್ದರೆ?
ಈಗ ನಡೆಯುತ್ತಿರುವುದು ಅವುಗಳಲ್ಲಿಯೇ ಅಲ್ಲವೇ!

ಬಿ. ಚಂದ್ರೇಗೌಡ, ಬೆಂಗಳೂರು
ಭಿಕ್ಷೆಗೂ, ಮತಭಿಕ್ಷೆಗೂ ಏನು ವ್ಯತ್ಯಾಸ?
ನರ ಬೇಡುವುದು ಭಿಕ್ಷೆ; ನರಿ ಬೇಡುವುದು ಮತಭಿಕ್ಷೆ.

ಪಿ.ಎನ್. ಶ್ರೀವತ್ಸ, ಬೆಂಗಳೂರು
ಜಾಣ ಕಿವುಡು ಇದ್ದಹಾಗೆ ಜಾಣ ಕುರುಡು ಇದ್ದಿದ್ದರೆ?
ಇದೆಯಲ್ಲ. ಭ್ರಷ್ಟತೆ, ಕಾಮಲೀಲೆಗಳು ಬೀದಿಯವರಿಗೆ ಕಂಡರೂ ಮನೆಯವರಿಗೆ ಕಾಣಿಸುವುದಿಲ್ಲ.

ರವಿ ಎಂ. ಪೈ, ಹೊನ್ನಾವರ
ಬದುಕಿನಲ್ಲಿ ಯಾರೇ ನಮ್ಮ ಕೈ ಬಿಟ್ಟರೂ ಮೊಬೈಲ್ ಮಾತ್ರ ನಮ್ಮ ಕೈ ಬಿಡುವುದಿಲ್ಲ. ಏಕೆ?



ಯಾರನ್ನೇ ನೋಡಿಕೊಳ್ಳದಷ್ಟು ಮುತುವರ್ಜಿಯಿಂದ ಅದನ್ನು ನೋಡಿಕೊಳ್ಳುವುದರಿಂದ.

ಎಂ.ಸಿ. ಧನ್ಯತಾ, ಬೆಂಗಳೂರು
ಮನೆಯೇ ದೇವಾಲಯ; ಗಂಡ ದೇವರು; ಹೆಂಡತಿ ಪೂಜಾರಿಣಿ. ಮಕ್ಕಳು?
ಅಪ್ಪನ ಗಮನ ಸೆಳೆಯಲು ಅಮ್ಮನ ಕೈಸೇರುವ ಜಾಗಟೆಗಳು.

■ ರಾಮ್